ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸ್ಪೆಷಲ್ ಕೇಸ್ ನಂಬ್ರ 24/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀನಿವಾಸ ಪರಾಡ್ಕರ್ | ಡಿ.ಡಬ್ಲ್ಯೂ: 11 |
| ತಂದೆಯ ಹೆಸರು | : | ನೀಲಕಂಠ ಪರಾಡ್ಕರ್ | |
| ಪ್ರಾಯ | : | 67 ವರ್ಷ | **ದಿನಾಂಕಃ 08.06.2022** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೃಷಿಕ | |
| ವಾಸಸ್ಥಳ | : | ಕುಕ್ಕಿಪಾಡಿ ಗ್ರಾಮ, ಬಂಟ್ವಾಳ ತಾಲೂಕು. | |

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ

ನಾನು ಸುಮಾರು 40 ವರ್ಷಗಳಿಂದ ಕೃಷಿ ಮಾಡುತ್ತಿದ್ದೇನೆ. ಆರೋಪಿ ನನ್ನ ಅಕ್ಕನ ಮಗ. ನಾನು ಆರೋಪಿಯ ಮನೆಗೆ ಆಗಾಗ ಹೋಗಿ ಬರುತ್ತೇನೆ. 2011 ರಲ್ಲಿ ನಾನು ಆರೋಪಿಗೆ ಉಡುಗೊರೆಯಾಗಿ ಒಂದು ಟಿ.ವಿ. ಯನ್ನು ನೀಡಿರುತ್ತೇನೆ. ಅದರ ಬೆಲೆ ರೂ.99,000/- ಇತ್ತು. ನಾನು ಅದನ್ನು ಚಿಲಿಂಬಿಯಲ್ಲಿರುವ ಪಂಚಮಿ ಎಲೆಕ್ಟ್ರಾನಿಕ್ಸ್ ಅಂಗಡಿಯಲ್ಲಿ ಖರೀದಿಸಿದ್ದೆನು ಮತ್ತು ಬಿಲ್ಲನ್ನು ಪಡೆದಿದ್ದೇನೆ. ಸಾಕ್ಷಿ ಬಿಲ್ಲನ್ನು ಗುರುತಿಸಿದ್ದು, ಅದನ್ನು ನಿಶಾನೆ ಡಿ-32 ಎಂದು ಗುರುತಿಸಲಾಯಿತು. ಆ ಟಿ.ವಿ. ಆರೋಪಿಯ ಮನೆಯಲ್ಲಿ ಇತ್ತು. ನಾನು ಟಿ.ವಿ. ಯನ್ನು ಆರೋಪಿಗೆ ಒಂದು ಪ್ರಮಾಣಪತ್ರ ವನ್ನು ನೀಡಿರುತ್ತೇನೆ ನಾನು ಆರೋಪಿಯ 50 ನೇ ಜನ್ಮದಿನ ಸೆಪ್ಟೆಂಬರ್ ದಲ್ಲಿ ಇದ್ದದ್ದರಿಂದ ಮತ್ತು ಆತನ ಮದುವೆಯ ವಾರ್ಷಿಕೋತ್ಸವ ಡಿಸೆಂಬರ್ ದಲ್ಲಿ ಇದ್ದದ್ದರಿಂದ ಹುಟ್ಟು ಹಬ್ಬ ಆಚರಣೆ ಮುಗಿದ ನಂತರ ಮತ್ತು ವಾರ್ಷಿಕೋತ್ಸವದ ಮೊದಲು ಮಧ್ಯದಲ್ಲಿ ಟಿ.ವಿ.ಯನ್ನು ಉಡುಗೊರೆಯಾಗಿ ನೀಡಿದ್ದೇನೆ.

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>.

2. ನಿಶಾನೆ ಡಿ-32 ರಲ್ಲಿರುವ ಬಿಲ್ಲನ್ನು ನಾನು ಆರೋಪಿಗೆ ಟಿ.ವಿ. ದಿನಾಂಕದಂದೇ ನೀಡಿದ್ದೆನು. ಅದು ಆತನ ಸುಪರ್ದಿನಲ್ಲೇ ಇತ್ತು. ನಾನು ಟಿ.ವಿ. ಖರೀದಿಸಲು ನಗದಾಗಿ ಹಣವನ್ನು ಅಂಗಡಿಯಲ್ಲಿ ನೀಡಿದ್ದೇನೆ. 2011 ರಲ್ಲಿ ನನಗೆ ರೂ.4,00,000/- ರಿಂದ ರೂ.5,00,000/- ಆದಾಯ ಬರುತ್ತಿತ್ತು. ನಾನು ಬಿಲ್ಲಿನಲ್ಲಿ ತೋರಿಸಿದ ಹಣವನ್ನು ನನ್ನ ಮನೆಯಲ್ಲಿ ಕೂಡಿಸಿ ಇಟ್ಟಿದ್ದೆನು. ಅದನ್ನೇ ಉಪಯೋಗಿಸಿದ್ದೇನೆ. 2011 ರಲ್ಲಿ ನನಗೆ ಬಂದ ಆದಾಯ ಕುರಿತು ದಾಖಲೆಗಳು ಇರುವುದಿಲ್ಲ. ನಾನು ಮತ್ತು ನನ್ನ ಹೆಂಡತಿ ಟಿ.ವಿ. ಖರೀದಿಸಲು ಅಂಗಡಿಗೆ ಹೋಗಿದ್ದೆವು. ಟಿ.ವಿ. ಯನ್ನು ನಾನೇ ಅಂಗಡಿಯಿಂದ ಕಾರಿನಲ್ಲಿ ತೆಗೆದುಕೊಂಡು ಹೋಗಿ ಆರೋಪಿಗೆ ನೀಡಿರುತ್ತೇನೆ. ನಾನು ಖರೀದಿಸಿದ ಟಿ.ವಿ. 40 ಇಂಚಿನ ಟಿ.ವಿ. ಆಗಿತ್ತು.

3. ನಾನು ರೂ.99,000/- ಹಣವನ್ನು ನೀಡಿ ಟಿ.ವಿ. ಖರೀದಿಸಿಲ್ಲ ಮತ್ತು ಆ ಟಿ.ವಿ.ಯನ್ನು ಆರೋಪಿಗೆ ನೀಡಿಲ್ಲ ಅಂದರೆ ಸರಿಯಲ್ಲ. ನಿಡಿ-32 ನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

4. ನಾನು 4 ವರ್ಷಗಳ ಹಿಂದೆ 45 ಇಂಚಿನ ಟಿ.ವಿ.ಯನ್ನು ಖರೀದಿಸಿದ್ದೇನೆ. ಅದರ ಬೆಲೆ ಎಷ್ಟು ಎಂದು ನೆನಪಿಲ್ಲ. ಅದಕ್ಕಿಂತ ಹಿಂದೆ ಯಾವ ಟಿ.ವಿ. ಇತ್ತು ಎಂಬುದು ನೆನಪಿಲ್ಲ. ನಾನು ನನ್ನ ಟಿ.ವಿ.ಯನ್ನು ಬಿ.ಸಿ.ರೋಡಿನಲ್ಲಿ ಖರೀದಿಸಿದ್ದೇನೆ.

Spl.C.No.24/2015 DW-11
Date: 08.06.2022

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.